ಅ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಯಲ್ಲಿ ದೇವಲ್ ಗಾಣಗಾಪೂರ ಭೀಮಾಬ್ಯಾರೇಜ್ ಕಮ್ ಬ್ರಿಡ್ಜ್ ಕಾಮಗಾರಿಗೆ ಮಂಜೂರಾತಿ ದೊರಕ್ಕಿದ್ದು ಯಾವಾಗ?

ಆ) ಇಲ್ಲಿಯವರೆಗೆ ಕಾಮಗಾರಿ ಪ್ರಾರಂಭವಾಗದೇ ಇರಲು ಕಾರಣಗಳೇನು? ಹಾಗೂ ಯಾವಾಗ ಪ್ರಾರಂಭವಾಗುತ್ತದೆ?

ಇ) ಈ ಕಾಮಗಾರಿಗೆ ಈ ವರ್ಷ ಬಿಡುಗಡೆಯಾಗಿರುವ ಹಣವೆಷ್ಟು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು) :

ಅ) ದಿನಾಂಕ : ೨೫.೩.೧೯೯೧ ರಂದು.

ಆ) ಈ ಕಾಮಗಾರಿಗೆ ತಾಂತ್ರಿಕ ಮಂಜೂರಾತಿ ನೀಡಲಾಗಿತ್ತು, ಈ ಕಾಮಗಾರಿಯ ಕರಡು ಟೆಂಡರ್ ಪೇಪರನ್ನು ಪರಿಶೀಲಿಸಲಾಗುತ್ತದೆ. ಟೆಂಡರ್ ಪರಿಶೀಲಿಸಿದ ನಂತರ ನಿಯಮಾವಳಿಗಳ ಪ್ರಕಾರ ಗುತ್ತಿಗೆದಾರರನ್ನು ಗೊತ್ತುಪಡಿಸಿ ನಂತರ ಕಾಮಗಾರಿಯನ್ನು ಪ್ರಾರಂಭಮಾಡಲಾಗುವುದು.

ಇ) ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದಧಿ ಮಂಡಳಿಯ ೧೯೯೫-೯೬ನೇ ಸಾಲಿನ ಕ್ರಿಯಾ ಯೋಜನೆಯನ್ನು ಸರ್ಕಾರವು ಪರಿಶೀಲಿಸುತ್ತಿದೆ. ಕ್ರಿಯಾಯೋಜನೆಗೆ ಸರ್ಕಾರದ ಮಂಜೂರಾತಿ ದೊರೆತ ನಂತರ ಈ ಕಾಮಗಾರಿಗೆ ಈ ವರ್ಷ ಬಿಡುಗಡೆಯಾಗುವ ಹಣವೆಷ್ಟು ಎಂಬುದು ತಿಳಿಯುವುದು.

ಮೊರಾರ್ಜಿ ದೇಸಾಯಿಯವರ ಜ್ಞಾಪಕಾರ್ಥವಾಗಿ ವಸತಿಶಾಲೆಗಳನ್ನು ತೆರೆಯುವ ಬಗ್ಗೆ

132 - ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾನ್ಯ ಮೊರಾರ್ಜಿ ದೇಸಾಯಿಯವರ ಜ್ಞಾಪಕಾರ್ಥವಾಗಿ ಪ್ರತಿ ಜಿಲ್ಲೆಯಲ್ಲೂ ವಸತಿಶಾಲೆಗಳನ್ನು ತೆರೆಯುವ ಉದ್ದೇಶ ಸರ್ಕಾರದ ಮುಂದೆ ಇದೆಯೇ, ಹಾಗಿದ್ದಲ್ಲಿ ರೂಪರೇಷಗಳೇನು?

ಆ) ಈ ದಿಸೆಯಲ್ಲಿ ಕೈಗೊಳ್ಳಲಾಗುತ್ತಿರುವ ಕ್ರಮಗಳು ಯಾವುವು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು. ಭಾರತ ರತ್ನ ದಿವಂಗತ: ಮೊರಾರ್ಜಿ ದೇಸಾಯಿಯವರ ಜನ್ಮಶತಮಾನೋತ್ಸವದ ಸ್ಮರಣಾರ್ಥಕವಾಗಿ ೧೯೯೫-೯೬ನೇ ಸಾಲಿನಿಂದ ಪ್ರತಿ ಜಿಲ್ಲೆಗೆ ಒಂದರಂತೆ ನವೋದಯ ಮಾದರಿಯ ವಸತಿಶಾಲೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಹಾಗೂ ಇತರ ಹಿಂದುಳಿದ ವರ್ಗದ ಮಕ್ಕಳ ವಿದ್ಯಾಭಿವೃದ್ಧಿಗಾಗಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಈ ಶಾಲೆಗಳಲ್ಲಿ ಪ್ರತಿಶತ ೫೦ ಸೀಟುಗಳನ್ನು ಪರಿಶಿಷ್ಟಜಾತಿ:ಪರಿಶಿಷ್ಟ ವರ್ಗಗಳಿಗೂ, ಪ್ರತಿಶತ ೪೦ ಸೀಟುಗಳನ್ನು ಇತರ ಹಿಂದುಳಿ